ಸರ್ಕಾರಿ ಜಮೀನುಗಳಲ್ಲಿನ ಅಕ್ರಮ ವಾಸದಮನೆಗಳ ಸಕ್ರಮಕ್ಕೆ ಬೆಂಗಳೂರು ಜಿಲ್ಲೆಯಲ್ಲಿ ಒಟ್ಟು 42,968 ಅರ್ಜಿಗಳು ಬಂದಿರುತ್ತವೆ.

ಈ) ಕೆಲವು ನಿಬಂಧನೆಗೊಳಪಟ್ಟು ಸರ್ಕಾರಿ ಜಮೀನುಗಳಲ್ಲಿನ ಅಕ್ರಮ ವಾಸದ ಮನೆಗಳ ಸಕ್ರಮಕ್ಕೆ ಅವಕಾಶವಿರುತ್ತದೆ. ಆದರಂತೆ ಕ್ರಮ ಜರುಗಿಸಲಾಗುತ್ತಿದೆ.

ಉ) ಈವರೆಗೆ 75 ಪ್ರಕರಣಗಳಲ್ಲಿ ತಾತ್ಕಾಲಿಕ ಮಂಜೂರಾತಿ ಆದೇಶ ಹೊರಡಿಸಿದೆ. 94-ಸಿ ರಡಿಯಲ್ಲಿ ಹೊರಡಿಸಲಾಗಿರುವ "ಕರ್ನಾಟಕ ಸ್ವಾಧೀನತೆಯಲ್ಲಿರುವ ಭೂಮಿಯಲ್ಲಿ ವಾಸದ ಮನೆಗಳ ನಿರ್ಮಾಣಕ್ಕೆ ಸಂಬಂಧಿಸಿದ ಭೂ ಮಂಜೂರಾತಿ ನಿಯಮಗಳು 1999" ರಲ್ಲಿ ನಿಗದಿಪಡಿಸಿರುವ ಮಾನದಂಡಗಳನ್ನು ಅನುಸರಿಸಲಾಗುತ್ತಿದೆ.

2002-2003ನೇ ಸಾಲಿನ ಶಾಸಕರ ನಿಧಿ

1775 (1590) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) ಮಾನ್ಯ ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2002-03ನೇ ಸಾಲಿನಲ್ಲಿ ಶಾಸಕರ ಪ್ರದೇಶಾಭಿವೃದ್ಧಿಗೆ ನೀಡಲಾದ ಶಾಸಕರ ಅನುದಾನವೆಷ್ಟು;

ಆ) ಈ ಅನುದಾನದಲ್ಲಿ ಬರ ಪರಿಹಾರ ಕಾಮಗಾರಿಗಾಗಿ ಅನುದಾನವನ್ನು ಕಡಿತಗೊಳಿಸಲಾಗಿದೆಯೇ;

ಇ) ಯಾವ ಯೋಜನೆಗಳಿಗೆ ಎಷ್ಟು ಹಣವನ್ನು ಕಡಿತಗೊಳಿಸಲಾಗಿದೆ;

ಈ) ಬ್ರಹ್ಮಾವರ ವಿಧಾನ ಸಭಾ ಕ್ಷೇತ್ರಕ್ಕೆ ಈ ಯೋಜನೆಯಿಂದ ಉಪಯೋಗವಾಗಿದೆಯೇ; ಆಗಿದ್ದಲ್ಲಿ, ವಿವರ ನೀಡುವುದು?

ಶ್ರೀ ಆರ್.ಬಿ. ತಿಮ್ಮಾಪುರ್ (ಯೋಜನಾ ಸಚಿವರು)

ಅ) ರೂ. 10.00 ಲಕ್ಷ

ಆ) ಇಲ್ಲ

ಇ) ಇಲ್ಲ

ವಿವರಗಳನ್ನು ಈ ಕೆಳಕಂಡಂತೆ ನೀಡಲಾಗಿದೆ.

ವರ್ಷ	ಅನುದಾನ	ಅನುಷ್ಠಾನ ಮಾಡಿದ ಕಾಮಗಾರಿಗಳು
2001-02 ರಲ್ಲಿ	ರೂ. 25 ಲಕ್ಷ	24
2002-03 ರಲ್ಲಿ	10 ಲಕ್ಷ	4

ರಾಜ್ಯದ ದೇವಸ್ಥಾನಗಳ ವತಿಯಿಂದ ನಡೆಸಲ್ಪಡುತ್ತಿರುವ ಕಾಲೇಜುಗಳು

1776 (2239) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ದೇವಸ್ಥಾನಗಳ ವತಿಯಿಂದ ನಡೆಸಲ್ಪಡುತ್ತಿರುವ ಕಾಲೇಜುಗಳ ಸಂಖ್ಯೆ ಎಷ್ಟು; ಇವುಗಳಲ್ಲಿ ಅನುದಾನ ಮತ್ತು ಅನುದಾನ ರಹಿತ ಕಾಲೇಜುಗಳ ಸಂಖ್ಯೆ ಎಷ್ಟು:

ಆ) ಇಂಥ ಎಷ್ಟು ಕಾಲೇಜುಗಳಿಗೆ ರಾಜ್ಯ ಮತ್ತು ಯು.ಜಿ.ಸಿ. ವೇತನವನ್ನು ಕೊಡಲಾಗುತ್ತಿದೆ:

(ಕಾಲೇಜುಗಳ ಹೆಸರು:ವಿವರಗಳನ್ನು ನೀಡುವುದು)